ದೂರವಾಣಿ: (0836) 2215355/255
Phone: (0836) 2215355/255

ಕರ್ನಾಟಕ ವಿಶ್ವವಿದ್ಯಾಲಯ
KARNATAK UNIVERSITY

Vice-Chancellor's Secretariat
ಕುಲಪತಿಗಳ ಕಾರ್ಯಾಲಯ

'A' Grade
NAAC Accredited

ಪಾವಟೆನಗರ, ಧಾರವಾಡ -580003
Pavate Nagar, Dharwad-580 003

ಕೆಯು/ವಿಸಿ/2019-20/ 1378

ದಿನಾಂಕ: 23.03.2020.

## ಕಛೇರಿ ಸುತ್ತೋಲೆ

**ವಿಷಯ:** ಕೊರೋನಾ ಸಾಂಕ್ರಾಮಿಕ ರೋಗ ಹರಡುತ್ತಿರುವ ಹಿನ್ನಲೆಯಲ್ಲಿ ವಿಶ್ವವಿದ್ಯಾಲಯದ ಮುಖ್ಯ ಆವರಣ, ವಿಶ್ವವಿದ್ಯಾಲಯದ ಅಧೀನ ಮಹಾವಿದ್ಯಾಲಯಗಳು, ಸ್ನಾತಕೋತ್ತರ ಕೇಂದ್ರಗಳು, ವಿವಿಧ ಪ್ರಾಥಮಿಕ ಮತ್ತು ಮಾಧ್ಯಮಿಕ ಬೋಧಕೇತರ ಸಿಬ್ಬಂದಿಗಳಿಗೆ ರಜೆಯನ್ನು ಘೋಷಿಸುವ ಕುರಿತು.

**ಉಲ್ಲೇಖ:** 1) ಕೆಯು/ವಿಸಿ/2019-20/1377 ದಿನಾಂಕ: 22.03.2020.
2) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 23.03.2020.

---

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳ್ವನಯ ದಿನಾಂಕ: 23.03.2020 ರಿಂದ 31.03.2020 ರವರೆಗೆ ಕರ್ನಾಟಕ ವಿಶ್ವವಿದ್ಯಾಲಯದ ಮುಖ್ಯ ಆವರಣ, ವಿಶ್ವವಿದ್ಯಾಲಯದ ಅಧೀನ ಮಹಾವಿದ್ಯಾಲಯಗಳು, ಸ್ನಾತಕೋತ್ತರ ಕೇಂದ್ರಗಳು, ವಿವಿಧ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಗಳಿಗೆ ಕೋವಿಡ್-19 (ಕೊರೋನಾ ವೈರಾಣು) ಹರಡುವಿಕೆ ತಡೆಗಟ್ಟುವ ನಿಟ್ಟಿನಲ್ಲಿ ರಜೆಯನ್ನು ಘೋಷಿಸಲಾಗಿದೆ. ಈ ಅವಧಿಯಲ್ಲಿ ನೌಕರರು ತಮ್ಮ ಕೇಂದ್ರ ಸ್ಥಾನವನ್ನು ಬಿಟ್ಟು ತೆರಳದಂತೆ ಕಟ್ಟುನಿಟ್ಟಾಗಿ ಆದೇಶಿಸಿದೆ. ಹಾಗೂ ವಿಶ್ವವಿದ್ಯಾಲಯದ ವಸತಿಗೃಹಗಳಲ್ಲಿ ವಾಸವಿರುವ ಬೋಧಕ/ಬೋಧಕೇತರ ಸಿಬ್ಬಂದಿಗಳು ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ವಹಿಸುವುದು ಮತ್ತು ಬೇರೆ ಕಡೆಗಳಲ್ಲಿ ಪ್ರಯಾಣ ಮಾಡದಂತೆ ಎಚ್ಚರ ವಹಿಸುವುದು. ಎಲ್ಲ ಸಿಬ್ಬಂದಿಗಳು ಹಾಗೂ ಅವರ ಸಂಬಂಧಿಕರಿಗೆ ಆರೋಗ್ಯಕ್ಕೆ ಸಂಬಂಧಿಸಿದಂತೆ ಅವಶ್ಯವಿದ್ದಲ್ಲಿ ಸೂಕ್ತ ವೈದ್ಯಕೀಯ ಉಪಚಾರವನ್ನು ಪಡೆಯುವುದು.

ಮುಂದುವರೆದು ಎಲ್ಲ ಆಡಳಿತ ಇಲಾಖಾ ಮುಖ್ಯಸ್ಥರು ತಮ್ಮ ದೂರವಾಣಿ/ ಮೊಬೈಲ್‌ಗಳನ್ನು ಚಾಲನೆಯಲ್ಲಿಡತಕ್ಕದ್ದು, ಅನಿವಾರ್ಯ ಮತ್ತು ತುರ್ತು ಹಾಗೂ ಆರ್ಥಿಕ ವರ್ಷದ ಕೊನೆಯಿರುವ ಪ್ರಯುಕ್ತ ಅದಕ್ಕೆ ಸಂಬಂಧಪಟ್ಟಂತೆ ಕಾರ್ಯನಿರ್ವಹಿಸುವ ಸಿಬ್ಬಂದಿಗಳು ಮುಂಜಾಗ್ರತಾ ಕ್ರಮಗಳನ್ನು ಅಳವಡಿಸಿಕೊಂಡು ಕಚೇರಿಯ ಕೆಲಸಗಳಿಗೆ ತೊಂದರೆಯಾಗದಂತೆ ನೋಡಿಕೊಳ್ಳತಕ್ಕದ್ದು.

ಮುಂದುವರೆದು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಸಂಬಂಧಿಸಿದ ಇಲಾಖೆಯು ಹೊರಡಿಸುವ ಆದೇಶ ಹಾಗೂ ನಿರ್ದೇಶನಗಳನ್ನು ಸುತ್ತೋಲೆಯ ಮೂಲಕ ತಿಳಿಸಲಾಗುವುದು.

ಕುಲಸಚಿವರು 23/3/2020

**ಸೂಚನೆ:** ಈ ಸುತ್ತೋಲೆಯು ಕವಿವಿ ಹಾಗೂ ಕರ್ನಾಟಕ ಮಹಾವಿದ್ಯಾಲಯದ ಆವರಣದಲ್ಲಿ ಕಾರ್ಯನಿರ್ವಹಿಸುವ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿಗಳ ಅಗತ್ಯ ತುರ್ತು ಸೇವೆ ಎಂದು ಪರಿಗಣಿಸಿರುವುದರಿಂದ ಈಗ ಉಲ್ಬಣವಾಗಿರುವ ಪರಿಸ್ಥಿತಿಯನ್ನು ಸಮರ್ಪಕವಾಗಿ ಎದುರಿಸಲು ಎಲ್ಲ ಮುನ್ನೆಚ್ಚರಿಕಾ ಕ್ರಮಗಳನ್ನು ಮಾಡಿಕೊಳ್ಳಲು ಸೂಚಿಸಿದೆ.

**ಪ್ರತಿ: ಭದ್ರತಾ ಅಧಿಕಾರಿ,** ಕ.ವಿ.ವಿ. ಧಾರವಾಡ ಅವರಿಗೆ ಮಾಹಿತಿಗಾಗಿ ಹಾಗೂ ಕರ್ನಾಟಕ ವಿಶ್ವವಿದ್ಯಾಲಯದ ಮತ್ತು ಕರ್ನಾಟಕ ಮಹಾವಿದ್ಯಾಲಯದ ಆವರಣದ ಪ್ರವೇಶ ಮತ್ತು ನಿರ್ಗಮನ ದ್ವಾರಗಳಲ್ಲಿ ಅತೀ ಹೆಚ್ಚಿನ ಜಾಗ್ರತೆಯನ್ನು ವಹಿಸುವುದು. ಹಾಗೂ ಅವರಣದೊಳಗೆ ಪ್ರವೇಶಿಸುವ ಅಧಿಕೃತವಲ್ಲದ ವ್ಯಕ್ತಿಗಳ/ವಾಹನಗಳನ್ನು ತಡೆಯಲು ಸೂಚಿಸಿದೆ. ಹಾಗೂ ತಮ್ಮ ಸಿಬ್ಬಂದಿಗಳ ಆರೋಗ್ಯದ ಕುರಿತು ಸೂಕ್ತ ಮುಂಜಾಗ್ರತೆ ವಹಿಸುವುದು.

**ಪ್ರತಿ: ಸಹಾಯಕ ಕುಲಸಚಿವರು,** ಸಾಮಾನ್ಯ ಆಡಳಿತ ವಿಭಾಗ, ಕ.ವಿ.ವಿ. ಧಾರವಾಡ ಅವರಿಗೆ ಮಾಹಿತಿಗಾಗಿ ಹಾಗೂ ಕರ್ನಾಟಕ ವಿಶ್ವವಿದ್ಯಾಲಯದ ಅವರಣದಲ್ಲಿರುವ ವಸತಿಗೃಹಗಳನ್ನು ಅಧಿಕೃತವಲ್ಲದ ವ್ಯಕ್ತಿಗಳಿಗೆ ವಿತರಿಸದಂತೆ ಹಾಗೂ ತುರ್ತು ಸಂದರ್ಭದಲ್ಲಿ ವಸತಿಗೃಹ ಅವಶ್ಯಕತೆಯನುಸಾರ ಬಳಕೆ ಮಾಡಿಕೊಳ್ಳಲು ಸೂಕ್ತ ವ್ಯವಸ್ಥೆ ಮಾಡಿಕೊಳ್ಳುವುದು. ಹಾಗೂ ಅಲ್ಲಿನ ಸಿಬ್ಬಂದಿಗಳ ಆರೋಗ್ಯದ ಕುರಿತು ಸೂಕ್ತ ಮುಂಜಾಗ್ರತೆ ವಹಿಸುವುದು.

**ಪ್ರತಿ: ನಿರ್ದೇಶಕರು,** ವಿದ್ಯಾರ್ಥಿ ಕಲ್ಯಾಣ ವಿಭಾಗ, ಕ.ವಿ.ವಿ. ಧಾರವಾಡ ಇವರಿಗೆ ಎಲ್ಲ ವಸತಿನಿಲಯಗಳಲ್ಲಿಯ ವಿದ್ಯಾರ್ಥಿಗಳಿಗೆ ರಜೆ ಮೇಲೆ ಕಳುಹಿಸಲಾಗಿದ್ದು, ಮುಂದಿನ ಆದೇಶವಾಗುವರೆಗೂ ಪ್ರವೇಶ ನೀಡಬಾರದು.

ಕುಲಸಚಿವರು 23/3/2020

<u>**ಪ್ರತಿಗಳು:**</u>

1) ಕುಲಸಚಿವರು (ಮೌಲ್ಯಮಾಪನ), ಕ.ವಿ.ವಿ. ಧಾರವಾಡ.
2) ಹಣಕಾಸು ಅಧಿಕಾರಿಗಳು, ಕ.ವಿ.ವಿ. ಧಾರವಾಡ.
3) ಎಲ್ಲ ಸಿಂಡಿಕೇಟ್/ವಿದ್ಯಾವಿಷಯಕ ಸದಸ್ಯರು, ಕ.ವಿ.ವಿ. ಧಾರವಾಡ.
4) ಎಲ್ಲ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರುಗಳಿಗೆ, ಕ.ವಿ.ವಿ. ಧಾರವಾಡ.
5) ನಿರ್ದೇಶಕರು, ವಿದ್ಯಾರ್ಥಿ ಕಲ್ಯಾಣ ವಿಭಾಗ, ಕ.ವಿ.ವಿ. ಧಾರವಾಡ.
6) ಎಲ್ಲ ಆಡಳಿತ ವಿಭಾಗಗಳ ಮುಖ್ಯಸ್ಥರುಗಳಿಗೆ, ಕ.ವಿ.ವಿ. ಧಾರವಾಡ.
7) ಪ್ರಾಚಾರ್ಯರು, ಕವಿವಿ ಅಧೀನದ ಮಹಾವಿದ್ಯಾಲಯಗಳು, ಧಾರವಾಡ ಮತ್ತು ಸಂಲಗ್ನ ಮಹಾವಿದ್ಯಾಲಯಗಳು
8) ಪ್ರಾಚಾರ್ಯರು, ಕವಿವಿ ಮಾಧ್ಯಮಿಕ ಶಾಲೆ, ಧಾರವಾಡ
9) ಮುಖ್ಯಾಧ್ಯಾಪಕರು, ಕವಿವಿ ಪ್ರಾ.ಪ್ರಾ. ಕನ್ನಡ ಶಾಲೆ, ಧಾರವಾಡ
10) ಆಡಳಿತಾಧಿಕಾರಿಗಳು, ಕ.ವಿ.ವಿ. ಸ್ನಾತಕೋತ್ತರ ಕೇಂದ್ರ, ಕೋಡಿಬಾಗ, ಕಾರವಾರ.
11) ಆಡಳಿತಾಧಿಕಾರಿಗಳು, ಕ.ವಿ.ವಿ. ಸ್ನಾತಕೋತ್ತರ ಕೇಂದ್ರ, ಎ.ಎಸ್‌ಎಸ್. ವಾಣಿಜ್ಯ ಮಹಾವಿದ್ಯಾಲಯ ಆವರಣ, ಗದಗ.
12) ಆಡಳಿತಾಧಿಕಾರಿಗಳು, ಕ.ವಿ.ವಿ. ಸ್ನಾತಕೋತ್ತರ ಕೇಂದ್ರ, ಕೆರಿಮತ್ತಿಹಳ್ಳಿ, ಹಾವೇರಿ.
13) ಸ್ಥಾನಿಕ ಅಭಿಯಂತರರು, ಕಟ್ಟಡ ನಿರ್ಮಾಣ ವಿಭಾಗ, ಕ.ವಿ.ವಿ. ಧಾರವಾಡ
14) ಅಧೀಕ್ಷಕರು, ಹಣಕಾಸು ವಿಭಾಗ, ಕ.ವಿ.ವಿ. ಧಾರವಾಡ.
15) ಅಧೀಕ್ಷಕರು, ಪರೀಕ್ಷಾ ಸಾಮಾನ್ಯ ಆಡಳಿತ ವಿಭಾಗ, ಕ.ವಿ.ವಿ. ಧಾರವಾಡ.
16) ಅಧ್ಯಕ್ಷರು, ಕರ್ನಾಟಕ ವಿಶ್ವವಿದ್ಯಾಲಯದ ಶಿಕ್ಷಕ ನೌಕರರ ಸಂಘ, ಕ.ವಿ.ವಿ. ಧಾರವಾಡ.
17) ಅಧ್ಯಕ್ಷರು, ಕರ್ನಾಟಕ ವಿಶ್ವವಿದ್ಯಾಲಯದ ಶಿಕ್ಷಕ ಪ.ಜಾ./ಪ.ಪಂ ನೌಕರರ ಸಂಘ, ಕ.ವಿ.ವಿ. ಧಾರವಾಡ.
18) ಅಧ್ಯಕ್ಷರು, ಕರ್ನಾಟಕ ವಿಶ್ವವಿದ್ಯಾಲಯದ ಶಿಕ್ಷಕೇತರ ನೌಕರರ ಸಂಘ, ಕ.ವಿ.ವಿ. ಧಾರವಾಡ.
19) ಅಧ್ಯಕ್ಷರು, ಕರ್ನಾಟಕ ವಿಶ್ವವಿದ್ಯಾಲಯದ ಶಿಕ್ಷಕೇತರ ಪ.ಜಾ./ಪ.ಪಂ ನೌಕರರ ಸಂಘ, ಕ.ವಿ.ವಿ. ಧಾರವಾಡ.
20) ಅಧ್ಯಕ್ಷರು, ಕರ್ನಾಟಕ ವಿಶ್ವವಿದ್ಯಾಲಯದ 'ಡಿ' ಗ್ರುಪ್ ನೌಕರರ ಸಂಘ, ಕ.ವಿ.ವಿ. ಧಾರವಾಡ.
21) ಅಧ್ಯಕ್ಷರು, ಕರ್ನಾಟಕ ವಿಶ್ವವಿದ್ಯಾಲಯದ 'ಸಿ' ಮತ್ತು 'ಡಿ' ಗ್ರುಪ್ ಗುತ್ತಿಗೆ ನೌಕರರ ಸಂಘ, ಕ.ವಿ.ವಿ. ಧಾರವಾಡ.
22) ಅಧ್ಯಕ್ಷರು, ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಸಂಶೋಧನಾ ವಿದ್ಯಾರ್ಥಿಗಳ ಸಂಘ, ಕ.ವಿ.ವಿ. ಧಾರವಾಡ.
23) ಅಧ್ಯಕ್ಷರು, ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿದ್ಯಾರ್ಥಿಗಳ ಸಂಘ, ಕ.ವಿ.ವಿ. ಧಾರವಾಡ.